# ನಗುವಲ್ಲಿ ನಗುವ ಮೊಗದಲ್ಲಿ

ನಗುವಲ್ಲಿ ನಗುವ ಮೊಗದಲ್ಲಿ ಅಂದ ಕಂಡೊ

ಬಸಳೇಯ ಸೊಂಟದಲಿ
ಜರಿಯಂಚು ರವಿಕೆ ಕಾಂತಿ ಕಂಡೊ
ಸೆರಗಂಚು ನವಿಲು
ಎದೆ ಮೇಲೆ ಕುಣಿವುದನು ಕಂಡೊ

ಮೂಗುತಿ ಬಿಳಿಮುತ್ತು
ತುಟಿಯಂಚು ನಗೆಯುಲ್ಲಿ ಕೆಂಪಾಗಿ ಕಂಡೊ
ಕಾಲ್ಗೆಜ್ಜೆ ದನಿಯಲ್ಲಿ
ಎದೆಯ ಮಾತುಗಳು ಹಾಡಾಗಿ ಕಂಡೊ

ಸೊಂಟದ ಬಿಂದಿಗೆಗೆ
ತುಟಿನಗೆಯು ಜಾರಿ ಅಲೆ ಎದ್ದುದನು ಕಂಡೊ
ಕಾವಲಿಗೆ ಹೊರಟ
ವೀಳೆತೋಟದ ದಾರಿ ನಿನ್ನ ನೆರಳಲ್ಲಿ ಕಂಡೊ

ಚಿಗರೆಲೆಯ ಕಿತ್ತು
ತೋರುಬೆರಳಲಿ ಸುಣ್ಣ ಬಳಿದುದು ಕಂಡೊ
ಪಕ್ಕ ಕೂರಿಸಿಕೊಂಡು
ಮೆಲಿದ ತಂಬುಲ ಬಾಯಿಗಿತ್ತುದು ಕನಸಲ್ಲಿ ಕಂಡೊ.

● ಸ. ರಘುನಾಥ

ಕಲೆ: ವಾಗೀಶ ಹೆಗಡೆ

